ಈಗ ಅವರು ಕೊಡುವ ಹಣಕ್ಕೆ ಅವನು ಕೈ ಚಾಚಬೇಕಾಗಿದೆ. ಅವರು ಹಾಕಿದಾಗ ಊಟ ಮಾಡಬೇಕಾಗಿದೆ. ಅವರ ಮನೆಯಲ್ಲಿಯೇ ಹೀನವಾಗಿ ಬದುಕುತ್ತ ಶೇಷಾಯುಷ್ಯ ಕಳೆಯಬೇಕಾಗಿದೆ. ಅಪ್ಪನದು ಎಂಥ ಗ್ರಹಚಾರ ಅಲ್ಲವೆ? ಈ ಸಂಕಟದ ಕಾರಣಕ್ಕಾಗಿಯೇ ಅಪ್ಪ ನನಗೆ ಬೈದರೂ ಅವನ ಮೇಲೆ ನನಗೆ ಸಿಟ್ಟು ಸಹ ಬರುತ್ತಿಲ್ಲ.'

ವೃಷಕೇತು ಶುಷ್ಕವಾಗಿ ನಕ್ಕ. 'ಏನಾದರೂ ಹಕ್ಕುಗಳ ವಿಷಯ ಬಂದಾಗ ನಾನೂ ನೀನೂ ಒಂದೇ!' ಹೇಳಿದ.

'ನನ್ನದು ಬಿಡು. ಆದರೆ ನಿನ್ನ ತಂದೆ ಕರ್ಣ ಹಿಂದೊಮ್ಮೆ ಸಮಯೋಚಿತವಾಗಿ ನಿರ್ಧಾರ ತೆಗೆದುಕೊಂಡಿದ್ದರೆ ಇವತ್ತು ನಿನಗೆ ಈ ಪರಿತಾಪ ಇರುತ್ತಿರಲಿಲ್ಲ. ಆತ ತುಂಬ ಹಟಮಾರಿತನ ಪ್ರದರ್ಶಿಸಿದ. ಬಂದ ಅವಕಾಶ ನಿರಾಕರಿಸಿದ. ತಾನೇ ಹಸ್ತಿನಾಪುರ ಸಾಮ್ರಾಜ್ಯಕ್ಕೆ ನಿಜವಾದ ಹಕ್ಕುದಾರ ಎಂಬುದನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ಅವನೇಕೆ ಹಿಂಜರಿಯಬೇಕಾಗಿತ್ತು?'

'ಇತ್ತು, ಅಪ್ಪಾಜಿಗೆ ಅವನವೇ ಆದ ಕಾರಣವಿತ್ತು.' ವೃಷಕೇತುವಿಗೆ ತುಸು ಅಸಮಾಧಾನವಾದ್ದನ್ನು ಗಮನಿಸಿಯೂ ಯುಯುತ್ಸು ಅಳುಕಲಿಲ್ಲ. 'ಅದೇ ನನಗೆ ಅರ್ಥವಾಗದ ವಿಷಯ.' ಅವನ ಆರೋಪ ನೇರವಾಗಿತ್ತು. ನಿನ್ನ ತಂದೆ ಹಾಗೇಕೆ ಮಾಡಿದ? ನನ್ನ ಅಣ್ಣ ದುರ್ಯೋಧನನ ಸ್ವಾರ್ಥಪೂರಿತ ಸ್ನೇಹ, ಯಾರೂ ಹೋಗಿ ಉಳಿಯಲು ಇಚ್ಛಿಸದ ಅಂಗರಾಜ್ಯ, ಇದಕ್ಕಿಂತ ಕೃಷ್ಣ ತೋರಿದ ಆಮಿಷ ಭಾರಿಯಾಗಿರಲಿಲ್ಲವೆ? ಆದರೂ ನಿನ್ನ ತಂದೆ, ದುರ್ಯೋಧನನಿಗೆ ನಿಷ್ಠನಾಗಿ ಉಳಿದುಬಿಟ್ಟ. ದೂರಾಲೋಚನೆ ಮಾಡಲಿಲ್ಲ ಅನಿಸುವುದಿಲ್ಲವೆ? ಒಂದು ವೇಳೆ ನಿನ್ನ ತಂದೆ ಒಪ್ಪಿದರೆ ಎಲ್ಲ ಎಷ್ಟು ಸುಖಕರವಾಗಿ ಮುಗಿಯಬಹುದಾಗಿತ್ತು.'

'ನಾವೂ ಆವತ್ತು ಹೀಗೇ ಅಂದುಕೊಂಡಿದ್ದೆವು. ಆದರೆ ದುರಾಲೋಚನೆ ಮಾಡಿಯೇ ನನ್ನ ತಂದೆ ಆಗದು ಎಂದದ್ದು ಎಂದು ಗೊತ್ತಾದ ಮೇಲೆ...'

'ಏನು ಹೇಳಿದ ನಿನ್ನ ತಂದೆ?'

★★★

ಆ ದಿನ ರಾತ್ರಿ ನಡೆದ ಸಂಗತಿ ವೃಷಕೇತುವಿಗೆ ಇನ್ನೂ ನಿಚ್ಚಳವಾಗಿ ನೆನಪಿದೆ. ರಾತ್ರಿ ಅಪ್ಪ ಎಂದಿನಂತೆ ಮನೆಗೆ ಬಂದ. ತಾವೆಲ್ಲ ಸೋದರರು ಅಪ್ಪನೊಂದಿಗೆ ಒಟ್ಟಿಗೇ ಊಟಕ್ಕೆ ಕೂರುವುದು ರೂಢಿ. ಅಮ್ಮ ಎಲ್ಲರಿಗೂ ಎಲೆಹಾಕಿ, ನೀರಿಟ್ಟು ಅನ್ನ ಬಡಿಸುತ್ತಿದ್ದಂತೆ ಅಪ್ಪ ಫಕ್ಕನೆ ನಕ್ಕ. ಮಾತಾಡುವ ಉಮೇದಿನಲ್ಲಿದ್ದ. 'ವೃಷಾಲಿ, ನಿನಗೊಂದು ಸುದ್ದಿ ಹೇಳಬೇಕಾಗಿದೆ' ಎಂದ.

'ಹೇಳಿ' ಅವಳು ಕುತೂಹಲದಿಂದ ಕಾದಳು, ನಾವೂ ಸಹ.

'ಇವತ್ತು ಏನಾಯಿತು ಗೊತ್ತೇ, ಕೃಷ್ಣ ಪಾಂಡವರ ಪ್ರತಿನಿಧಿಯಾಗಿ, ಯುದ್ಧ ನಿಲ್ಲಿಸುವ ಕೊನೆಯ ಪ್ರಯತ್ನ ಮಾಡಲು ಕೌರವ ರಾಜಸಭೆಗೆ ಬಂದಿದ್ದ. ಸಂಧಾನ ಮುರಿದುಬಿತ್ತು. ಅವನು ಉಪಪ್ಲಾವ್ಯಕ್ಕೆ ಹಿಂದಿರುಗುವ ಮೊದಲು ಅನಿರೀಕ್ಷಿತವಾಗಿ ರಥ ತಂದು ನನ್ನ ಬಳಿ ನಿಲ್ಲಿಸಿ 'ಹತ್ತು' ಅಂದ. ನನ್ನನ್ನು ಕರೆದುಕೊಂಡು ಒಂದು ಏಕಾಂತ ಸ್ಥಳಕ್ಕೆ ಹೋದ. ಅಲ್ಲಿ ನನ್ನೊಂದಿಗೆ ಆಪ್ತವಾಗಿ ಕೂತು ಒಂದು ರಾಜ ರಹಸ್ಯ ಹೇಳಿದ...'

'ಏನದು?'

'ನೀನು ಸೂತ ಕುಲದವನಲ್ಲ, ಕ್ಷತ್ರಿಯ ಎಂದ. ನನ್ನ ಹುಟ್ಟಿನ ರಹಸ್ಯ ಹೇಳಿದ. ನಾನು ಕುಂತೀದೇವಿಯ ಮೊದಲ ಮಗನಂತೆ. ಪಾಂಡವ ಕೌರವರಿಗೆಲ್ಲ ಹಿರಿಯನಂತೆ...'